# ಕರ್ನಾಟಕ ವಿಧಾನ ಪರಿಷತ್ತು

1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 446 (389)
2. ಸದಸ್ಯರ ಹೆಸರು : ಶ್ರೀ ಸಿ.ಎನ್. ಮಂಜೇಗೌಡ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)
3. ಉತ್ತರಿಸುವ ದಿನಾಂಕ : 15.09.2022
4. ಉತ್ತರಿಸುವ ಸಚಿವರು : ಮುಖ್ಯಮಂತ್ರಿಗಳು

| ಕ್ರಮ ಸಂಖ್ಯೆ | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯ ಸರ್ಕಾರದ ಆಡಳಿತದಲ್ಲಿ ಸುಧಾರಣೆ ತರಬೇಕೆಂಬ ಉದ್ದೇಶವನ್ನಿಟ್ಟುಕೊಂಡು ಇಲ್ಲಿಯ ತನಕ ಎಷ್ಟು ಆಡಳಿತ ಸುಧಾರಣಾ ಆಯೋಗವನ್ನು ರಚನೆ ಮಾಡಲಾಗಿದೆ: (ವಿವರವಾದ ಮಾಹಿತಿ ಒದಗಿಸುವುದು) | ಇದುವರೆಗೂ ಎರಡು ಆಡಳಿತ ಸುಧಾರಣಾ ಆಯೋಗಗಳನ್ನು ರಚನೆ ಮಾಡಲಾಗಿದೆ.<br>1) ಶ್ರೀ ಹಾರನಹಳ್ಳಿ ರಾಮಸ್ವಾಮಿ ಅಧ್ಯಕ್ಷತೆಯ ಕರ್ನಾಟಕ ಆಡಳಿತ ಸುಧಾರಣಾ ಆಯೋಗ. (ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 19 ಎಎಂಸಿ 2000, ದಿನಾಂಕ:17.04.2000).<br>2) ಕರ್ನಾಟಕ ಆಡಳಿತ ಸುಧಾರಣಾ ಆಯೋಗ-2. (ಸರ್ಕಾರದ ಆದೇಶ ಸಂಖ್ಯೆ:ಸಿಆಸುಇ (ಆಸು) 05 ಅಸಪ 2020, ದಿನಾಂಕ:07.01.2021) |
| ಆ) | ಇಲ್ಲಿಯ ತನಕ ಎಷ್ಟು ಆಡಳಿತ ಸುಧಾರಣಾ ಆಯೋಗದ ಅಧ್ಯಕ್ಷರುಗಳು ಸರ್ಕಾರಕ್ಕೆ ವರದಿ ಸಲ್ಲಿಸಿದ್ದಾರೆ; (ವರದಿಯ ಪ್ರತಿಯನ್ನು ನೀಡುವುದು) | 1) ಶ್ರೀ ಹಾರನಹಳ್ಳಿ ರಾಮಸ್ವಾಮಿ ಅಧ್ಯಕ್ಷತೆಯ ಆಡಳಿತ ಸುಧಾರಣಾ ಆಯೋಗವು ಡಿಸೆಂಬರ್-2001 ರಲ್ಲಿ ಅಂತಿಮ ವರದಿಯನ್ನು ಸರ್ಕಾರಕ್ಕೆ ಸಲ್ಲಿಸಿದೆ. (ವರದಿಯ ಪ್ರತಿಯು **dparar.karnataka.gov.in** ವೆಬ್ ಸೈಟ್ ನಲ್ಲಿ ಲಭ್ಯವಿದೆ)<br>2) ಶ್ರೀ ಟಿ.ಎಂ. ವಿಜಯಭಾಸ್ಕರ್, ಭಾ.ಆ.ಸೇ., (ನಿವೃತ್ತ) ಇವರ ಅಧ್ಯಕ್ಷತೆಯಲ್ಲಿ ರಚನೆಯಾದ ಕರ್ನಾಟಕ ಆಡಳಿತ ಸುಧಾರಣಾ ಆಯೋಗ-2 ಇದುವರೆಗೂ ಮೂರು ವರದಿಗಳನ್ನು ಸರ್ಕಾರಕ್ಕೆ ಸಲ್ಲಿಸಿದೆ (ವರದಿಯ ಪ್ರತಿಯು **karc2.karnataka.gov.in** ವೆಬ್ ಸೈಟ್ ನಲ್ಲಿ ಲಭ್ಯವಿದೆ) |
| ಇ) | ಹಾಗಿದ್ದಲ್ಲಿ ರಚನೆ ಮಾಡಿದ ಆಯೋಗದ ಅಧ್ಯಕ್ಷರುಗಳು ಇಲ್ಲಿಯ ತನಕ ಆಡಳಿತ ಸುಧಾರಣೆಯಲ್ಲಿ ನೀಡಿರುವ ವರದಿಯನ್ನು ಸರ್ಕಾರ ಒಪ್ಪಿಕೊಂಡು ಕಾರ್ಯಗತ ಮಾಡಿರುವ ಬಗ್ಗೆ ವಿವರವಾದ ಮಾಹಿತಿಯೊಂದಿಗೆ ಹಾಗೂ ಸರ್ಕಾರದ ಆದೇಶ/ಸುತ್ತೋಲೆಗಳನ್ನು | 1) ಶ್ರೀ ಹಾರನಹಳ್ಳಿ ರಾಮಸ್ವಾಮಿ ಅಧ್ಯಕ್ಷತೆಯ ಆಡಳಿತ ಸುಧಾರಣಾ ಆಯೋಗದ ವರದಿಗಳನ್ನು ಒಪ್ಪಿ, ಬಹುತೇಕ ಶಿಫಾರಸ್ಸುಗಳನ್ನು ಇಲಾಖಾವಾರು ಈಗಾಗಲೇ ಅನುಷ್ಠಾನಗೊಳಿಸಲಾಗಿರುತ್ತದೆ.<br>2) ಶ್ರೀ ಟಿ.ಎಂ. ವಿಜಯಭಾಸ್ಕರ್, ಭಾ.ಆ.ಸೇ., (ನಿವೃತ್ತ) ಇವರ ಅಧ್ಯಕ್ಷತೆಯ ಕರ್ನಾಟಕ ಆಡಳಿತ ಸುಧಾರಣಾ ಆಯೋಗ-2 ಇದುವರೆಗೂ ನೀಡಿರುವ ಮೊದಲನೇ, ಎರಡನೇ ಮತ್ತು ಮೂರನೇ ವರದಿಯಲ್ಲಿನ |

| | | |
|---|---|---|
| | ಸಲ್ಲಿಸುವುದರೊಂದಿಗೆ ವಿವರ ನೀಡುವುದು; | ಶಿಫಾರಸ್ಸುಗಳು ಅನುಷ್ಠಾನಗೊಳಿಸುವ ಕುರಿತು ಪರಿಶೀಲನೆಯಲ್ಲಿರುತ್ತದೆ. |
| ಈ) | ಒಂದು ಜಿಲ್ಲಾಡಳಿತದಿಂದ ಯೋಜನೆಯ ಬಗ್ಗೆಯಾಗಲಿ, ಅಭಿವೃದ್ಧಿ ಕಾರ್ಯವೇ ಆಗಲಿ ಅಥವಾ ವೈಯಕ್ತಿಕ ಕೆಲಸವೇ ಆಗಲಿ, ಸರ್ಕಾರದ ಸಚಿವಾಲಯಕ್ಕೆ ಬಂದ ಪ್ರಸ್ತಾವನೆಯನ್ನು ಸಚಿವಾಲಯದ ಇಲಾಖೆಗಳಲ್ಲಿ 5-6 ಹಂತಗಳಲ್ಲಿ ಪರಿಶೀಲನೆ ಮಾಡಿ 5-6 ತಿಂಗಳುಗಟ್ಟಲೇ ಅಥವಾ ವರ್ಷಾನುಗಟ್ಟಲೇ ಕಡತಗಳನ್ನು ವಿಳಂಬವಾಗಿ ಕಳುಹಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿಲ್ಲವೇ; | ವಿವಿಧ ಇಲಾಖೆಗಳು ಮತ್ತು ಕ್ಷೇತ್ರ ಇಲಾಖೆಗಳಿಂದ ಅಗತ್ಯವಿರುವ ಮಾಹಿತಿ ನಿರೀಕ್ಷಣೆಯಲ್ಲಿರುವುದರಿಂದ ಕಡತಗಳು ವಿಲೇವಾರಿಯಾಗದೇ ಬಾಕಿ ಉಳಿದಿರುತ್ತವೆ. |
| ಉ) | ಬಂದಿದ್ದಲ್ಲಿ, ಸರ್ಕಾರ ಈ ಬಗ್ಗೆ ತೆಗೆದುಕೊಂಡಿರುವ ಕ್ರಮಗಳೇನು; (ವಿವರ ನೀಡುವುದು) | ಇಲಾಖಾವಾರು ಕಡತ ವಿಲೇವಾರಿ ವರದಿಯನ್ವಯ ಸರ್ಕಾರದ ಮುಖ್ಯ ಕಾರ್ಯದರ್ಶಿಯವರು ಪ್ರತಿ ತಿಂಗಳು ಎಲ್ಲಾ ಇಲಾಖೆಗಳ ಕಾರ್ಯದರ್ಶಿಗಳೊಂದಿಗೆ ಕಡತ ವಿಲೇವಾರಿ ವಿಳಂಬ/ಪ್ರಗತಿ ಕುರಿತು ಪರಿಶೀಲಿಸುತ್ತಿದ್ದು, ಶೀಘ್ರ ವಿಲೇವಾರಿಗೆ ಸೂಚನೆಗಳನ್ನು ನೀಡಲಾಗುತ್ತಿದೆ. |
| ಊ) | ಇ-ಆಡಳಿತ ವ್ಯವಸ್ಥೆಯನ್ನು ಸಚಿವಾಲಯದ ಎಲ್ಲಾ ಇಲಾಖೆಗಳಲ್ಲಿ ಮತ್ತು ರಾಜ್ಯ, ಜಿಲ್ಲಾ, ತಾಲ್ಲೂಕು, ಹೋಬಳಿ ಮಟ್ಟದ ಇಲಾಖೆಗಳಿಗೂ ಇ-ಆಡಳಿತದ ವ್ಯವಸ್ಥೆಯನ್ನು ತರಲು ಸರ್ಕಾರ ಹಮ್ಮಿಕೊಂಡಿರುವ ಕಾರ್ಯಕ್ರಮಗಳೇನು; (ವಿವರ ನೀಡುವುದು) | ಆಡಳಿತ ದಕ್ಷತೆ ಮತ್ತು ಪಾರದರ್ಶಕತೆಯನ್ನು ಹೆಚ್ಚಿಸಲು ಸಚಿವಾಲಯದಲ್ಲಿ ಮತ್ತು ರಾಜ್ಯ ಜಿಲ್ಲಾ, ತಾಲ್ಲೂಕು, ಹೋಬಳಿ ಮಟ್ಟದ ಇಲಾಖೆಗಳಲ್ಲಿ ಇ-ಆಫೀಸ್ ತಂತ್ರಾಂಶವನ್ನು ಅನುಷ್ಠಾನಗೊಳಿಸಲಾಗುತ್ತಿದೆ.<br><br>1) ಸರ್ಕಾರದ ಆದೇಶ ಸಂಖ್ಯೆ:ಸಿಆಸುಇ 44 ಕತವ 2019, ದಿನಾಂಕ:12.04.2019 ರನ್ವಯ ದಿನಾಂಕ:01.05.2019 ರಿಂದ ಜಾರಿಗೆ ಬರುವಂತೆ ಸಚಿವಾಲಯದಲ್ಲಿ ಕಡ್ಡಾಯವಾಗಿ ಇ-ಆಫೀಸ್ ತಂತ್ರಾಂಶವನ್ನು ಬಳಸುವಂತೆ ಆದೇಶಿಸಲಾಗಿದೆ. ಪ್ರಸ್ತುತ ಸರ್ಕಾರ ಸಚಿವಾಲಯದ ಎಲ್ಲಾ ಇಲಾಖೆಗಳಲ್ಲೂ ಇ-ಆಫೀಸ್ ತಂತ್ರಾಂಶವನ್ನು ಬಳಸಲಾಗುತ್ತಿದೆ.<br><br>2) ಕ್ಷೇತ್ರ ಇಲಾಖೆ, ಜಿಲ್ಲಾ ಹಾಗೂ ತಾಲ್ಲೂಕು ಮಟ್ಟದ ಇಲಾಖೆಗಳಲ್ಲಿ ಇ-ಆಫೀಸ್ ತಂತ್ರಾಂಶ ಅನುಷ್ಠಾನಗೊಳಿಸುವ ಕುರಿತು ಸರ್ಕಾರದ ಆದೇಶ ಸಂಖ್ಯೆ:ಸಿಆಸುಇ 68 ಕತವ 2019, ದಿನಾಂಕ:23.09.2019 ಮತ್ತು ಸೇರ್ಪಡೆ ಸಂಖ್ಯೆ:ಸಿಆಸುಇ 122 ಕತವ 2019, ದಿನಾಂಕ:24.09.2019 ನ್ನು ಹೊರಡಿಸಲಾಗಿದೆ. ಅದರಂತೆ, ಇ-ಆಫೀಸ್ ಅನುಷ್ಠಾನ ಪ್ರಕ್ರಿಯೆಯು ಚಾಲ್ತಿಯಲ್ಲಿದ್ದು, ಪ್ರಸ್ತುತ 974 (91 ಕ್ಷೇತ್ರ ಇಲಾಖೆ, 633- |

| | | |
|---|---|---|
| | | ಜಿಲ್ಲಾ ಮಟ್ಟದ ಕಛೇರಿಗಳು ಹಾಗೂ 131-ತಾಲ್ಲೂಕು ಮಟ್ಟದ ಕಛೇರಿಗಳು) ಇಲಾಖೆ/ ಕಛೇರಿಗಳಲ್ಲಿ ಇ-ಆಫೀಸ್ ತಂತ್ರಾಂಶವನ್ನು ಅನುಷ್ಠಾನಗೊಳಿಸಲಾಗಿದೆ.<br><br>3) ರಾಜ್ಯದ ಎಲ್ಲಾ ನಿಗಮ / ಮಂಡಳಿ/ ಆಯೋಗ / ನಿಯಮಿತ ಕಂಪನಿ ಮತ್ತು ಇತರೆ ಸ್ವಾಯತ್ತ ಸಂಸ್ಥೆಗಳಲ್ಲಿ ಇ-ಆಫೀಸ್ ತಂತ್ರಾಂಶವನ್ನು ಅನುಷ್ಠಾನಗೊಳಿಸಲು ಸರ್ಕಾರದ ಆದೇಶ ಸಂಖ್ಯೆ:ಸಿಆಸುಇ 124 ಪಿಆರ್‌ಜೆ 2021, ದಿನಾಂಕ:10/02/2022 ನ್ನು ಹೊರಡಿಸಲಾಗಿರುತ್ತದೆ. ಪ್ರಸ್ತುತ 119 ನಿಗಮ/ಮಂಡಳಿ/ಆಯೋಗ/ನಿಯಮಿತ ಕಂಪನಿ ಮತ್ತು ಇತರೆ ಸ್ವಾಯತ್ತ ಸಂಸ್ಥೆಗಳಲ್ಲಿ (ಜಿಲ್ಲಾ ಮಟ್ಟವು ಸೇರಿದಂತೆ) ಇ-ಆಫೀಸ್ ತಂತ್ರಾಂಶವನ್ನು ಅನುಷ್ಠಾನಗೊಳಿಸಲಾಗಿದೆ. |
| **(ಖ)** | ಸರ್ಕಾರದ ಸಚಿವಾಲಯದ ಮಟ್ಟದಲ್ಲಿ ಕೇವಲ 3 ಹಂತಗಳನ್ನು ಇಟ್ಟು ರಾಜ್ಯ ಮಟ್ಟದ ಅಧಿಕಾರಿ/ಇಲಾಖೆ, ಜಿಲ್ಲಾ ಮಟ್ಟದ ಅಧಿಕಾರಿ ಇಲಾಖೆಗಳಿಂದ ಬಂದಂತಹ ಪ್ರಸ್ತಾವನೆಗಳನ್ನು ಪರಿಶೀಲನೆ ಮಾಡಿ ವಿಳಂಬ ಮಾಡದೆ 15 ರಿಂದ 20 ದಿವಸದೊಳಗೆ ಕಡತ ವಿಲೇವಾರಿ ಮಾಡಲು ಸರ್ಕಾರಕ್ಕಿರುವ ತೊಂದರೆಗಳೇನು; ಈ ಬಗ್ಗೆ ಸರ್ಕಾರ ಕ್ರಮ ತೆಗೆದುಕೊಳ್ಳುವುದೆ? (ಮಾಹಿತಿ ನೀಡುವುದು) | ಏನು ಇಲ್ಲ. |

ಸಂಖ್ಯೆ:ಸಿಆಸುಇ(ಆಸು) 19 ಅಸಪ 2022

(ಬಸವರಾಜ ಬೊಮ್ಮಾಯಿ)
ಮುಖ್ಯಮಂತ್ರಿ